


ವಿಜೇತರಾದ ಶುಭಂ ಗೋಯಲ್, ಮೊಹಮ್ಮದ್ ರಿಫಸ್ ಎಸ್, ವೈಭವ್ ಪದ್ಮನಾಭ

# ‘ಹಲ್ಟ್ ಪ್ರೈಜ್’ ಗೆದ್ದ ಸಿಎಂಆರ್‌ಐಟಿ

**ಆರ್.ವಿ. ಕಾಲೇಜ್** ಆಫ್ ಎಂಜಿನಿಯರಿಂಗ್ ಆಯೋಜಿಸಿದ್ದ ಪ್ರತಿಷ್ಠಿತ ಹಲ್ಟ್ ಪ್ರೈಜ್ ಅನ್ನು ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಗೆದ್ದಿದ್ದಾರೆ.

ವಿಶ್ವದಾದ್ಯಂತ 25 ನಗರಗಳಲ್ಲಿ ಮುಂದಿನ ತಿಂಗಳು ನಡೆಯುವ ಹಲ್ಟ್ ಪ್ರೈಜ್ ರೀಜನಲ್ಸ್‌ನಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.

ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ವಿಶ್ವವಿದ್ಯಾಲಯ (ವಿಟಿಯು) ವ್ಯಾಪ್ತಿಗೆ ಬರುವ ರಾಜ್ಯದ 18 ಕಾಲೇಜುಗಳ 54 ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

5ನೇ ಸೆಮಿಸ್ಟರ್ ವಿದ್ಯಾರ್ಥಿಗಳಾದ ಶುಭಂ ಗೋಯಲ್, ಮೊಹಮ್ಮದ್ ರಿಫಸ್ ಎಸ್. ಮತ್ತು ವೈಭವ್ ಪದ್ಮನಾಭ ತಾವು ಅಭಿವೃದ್ಧಿಪಡಿಸಿದ ‘ವಾಟರ್ ಆಟೊಮೈಸರ್’ ಪ್ರದರ್ಶಿಸಿದರು. ಈ ಸಾಧನವನ್ನು ನಲ್ಲಿಗೆ ಜೋಡಿಸಿದರೆ ಶೇ.90ರಷ್ಟು ನೀರು ಪೋಲಾಗುವುದನ್ನು ತಪ್ಪಿಸಬಹುದು ಎನ್ನುತ್ತಾರೆ ವಿದ್ಯಾರ್ಥಿಗಳು.

ವಿದ್ಯಾರ್ಥಿಗಳು ಈ ಉತ್ಪನ್ನವನ್ನು ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಅಭಿವೃದ್ಧಿಪಡಿಸಿ ಮಾರುಕಟ್ಟೆಗೆ ತಲುಪಿಸಲು ಬಯಸಿದ್ದಾರೆ. ಸಿಎಂಆರ್‌ಐಟಿ ಪ್ರಾಂಶುಪಾಲ ಡಾ. ಸಂಜಯ್ ಜೈನ್ ವಿದ್ಯಾರ್ಥಿಗಳಿಗೂ ಅಭಿನಂದನೆ ಸಲ್ಲಿಸಿದ್ದಾರೆ. ❖